ಮೆಯ್ಯೆತ್ತೆನ್ನಯ ನಿರ್ಮಲಪ್ರಕೃತಿಯೆತ್ತೀ ದೇಹದವ್ಯಾಧಿಯಿಂ ॥
ಪೊಯ್ಯಲ್ಪೆತ್ತಿಹುದೆತ್ತಲೆನ್ನ ನಿಜವೆತ್ತೊಯ್ದನ್ನ ನಿಮ್ಮತ್ತ ದ |
ಯ್ಯಯ್ಯಾ ರಕ್ಷಿಸು ರಕ್ಷಿಸಾ ತಳುವಿದೇಂ ರತ್ನಾಕರಾಧೀಶ್ವರಾ ॥ ೨೪

ದಾರಿದ್ರ್ಯಂ ಕವಿದಂದು ಕಾಯ್ದು ಪಗೆಗಳ್ತ್ರಾಸಂಕೆಗೊಟ್ಟಂದು ದು|
ರ್ವಾರವ್ಯಾಧಿಗಳೊತ್ತಿದಂದು ಮನದೊಳ್ ನಿರ್ವೇಗಮುಕ್ಕಂ ಬಱ ॥
ಕ್ಕಾರೋಗಂ ಕೆಱದಂದು ವೈರಿಲಯಮಾದಂದರ್ಥಮಾದಂದಿದೇಂ |
ವೈರಾಗ್ಯಂ ತಲೆದೋಱು ದಂಡಿಸುವುದೋ ರತ್ನಾಕರಾಧೀಶ್ವರಾ ॥ ೨೫

ಮೆಯ್ಯೊಳ್ತೋಱುವ ರೋಗದಿಂ ಮನಕೆ ಬಂದಾಯಾಸದಿಂ ಭೀತಿವ|
ಟ್ಟಯ್ಯೋ! ಎಂದೊಡೆ ಸಿದ್ಧಿಯೇಂ ಜನಕನುಂ ತಾಯುಂ ಪಲುಂ
ಬಲ್ಲಡೇ ॥
ಗೆಯ್ಯಲ್ಕಾರ್ಪರೆ ತಾವುಮುಮ್ಮಳಿಸುವರ್ಕೆಂದೊಡಂ ಜಿಹ್ವೆಯೊ|
ಮ್ಮಯ್ಯಾ ಸಿದ್ಧಜಿನೇಶಯೆಂದೊಡೆ ಸುಖಂ ರತ್ನಾಕರಾಧೀಶ್ವರಾ ॥ ೨೬

ತಾಯುಂ ತಂದೆಯುಮಾಸೆವಟ್ಟುಳುತೆ ಸಾವಂ ಸತ್ತುಬೇಱಪ್ಪರಾ |
ಕಾಯಂ ಬೊಕ್ಕೊಗೆವೆಂ ಬೞಿಕ್ಕವರುಮಂ ತಾಯ್ತಂದೆಯೆಂದಪ್ಪಿಕೊಂ|
ಡಾಯೆಂದಾಡುವನಿತ್ತಲಂದು ಪಡೆದರ್ಗಿಚ್ಛ್ರಸನಾತ್ಮಂಗಿದೇಂ |
ಮಾಯಾಮೋಹಮೊ ಪೇೞ್ವುದೇನನಕಟಾ ರತ್ನಾಕರಾಧೀಶ್ವರಾ ॥ ೨೭

ಸ್ತ್ರೀಯುಂ ಮಕ್ಕಳನೆಂತೆಗಲ್ವೆ ನಿಮಗಾರ್ರುಂಟೆಂದು ಗೋಳಿಟ್ಟ ಕ|
ಣ್ಣೀಯುಂ ಬಿಟ್ಟುದುಮಂ ಬೞಿಕ್ಕದಯಿಪಂ ತಾನತ್ತ ಬೇಱಪ್ಪರೊಳ್ ॥
ಪ್ರಾಯಂದಾಳ್ದು ವಿವಾಹಮಾಗಿ ಸುತರುಂ ಮುದ್ದಾಡುವಂ ಮುನ್ನಿನಾ|
ಸ್ತ್ರೀಯುಂ ಮಕ್ಕಳನಾಗಳೇಕೆ ನೆನೆಯಂ ರತ್ನಾಕರಾಧೀಶ್ವರಾ ॥ ೨೮

ದರಗಾರ್ಪಾಂಡವರ್ಗೇನುಮಂ ಕುಡನದೇಂ ಪಿಂಬೊಳ್ತನೊಳ್ಕರ್ಣ್ಣನು॥
ವರ್ತೆ ದಾರಿದ್ರ್ಯನೆನಲ್ಕೆ ಸುದ ನರರೇಂ ಧರ್ಮ್ಮಾರ್ಥರಾಧೀಶರಾ ।
ದರಿದ್ರೇಂ ಪಾಪಶುಭೋದಯಕ್ರಿಯೆಯುಲಾ ರತ್ನಾಕರಾಧೀಶ್ವರಾ ॥೪೮

ಉಪಭೋಗಂ ಬರೆ ಭೋಗವೈತರೆ ಮನೋರಾಗಂಗಳಂ ಭೋಗಿಪಂ ।
ತುಪಸರ್ಗಂಬರೆ ಮೋಙ್ಧರಿದ್ರ್ಯವಪಸಲ್ ಸಂತೋಷಮಂ ತಾಳ್ದನಿ॥
ವ್ಮ್ರ ಪದಾಂಭೋಜಯುಗಂ ಸದಾಶರಣೆನುತ್ತಿರ್ಪ್ಪ್ರಸುಮಂಗಾಗ್ರಹ ।
ಸ್ಥಪದಂ ತಾನೆ ಮುನೀಂದ್ರಪದ್ಧತಿಯುಲಾ ರತ್ನಾಕರಾಧೀಶ್ವರಾ ॥೪೯

ಸಿರಿಯುಂ ಶಾರಮುವಾಪ್ಲಮುಂ ತೊವರು ಮುಪ್ಪುಂ ಕೈಪಿಯುಂ ಬೇಱವೇ
ಱಿ ಪಿತಂದೋರ್ಕುರ್ಪೆನುತ್ತವಕೊಲಿಪವ್ರೋಳ್ ಶ್ರೀಗಂ ದರಿದ್ರೋದ್ಧುರಾ ॥
ಗೃಹಕಂ ಭೋಗಕೆ ರೋಗಕಂ ಪಲುಪಿಗಂ ಕೇಡಿಂಗೆಯುಂ ಬಾಧೆಗು ।
ತ್ಸಹಮಂ ಮಾಱ್ಪ ಗೃಹಸ್ಥನುಂ ಸುಖಿಯುಲಾ ರತ್ನಾಕರಾಧೀಶ್ವರಾ ॥

ಘಟಿಕಾಮಾತ್ರಕನನ್ಯರೊಳ್ ಕಥೆಯನೊಂದಂ ಸೂಚಿಸುತ್ತಿರ್ದೊಡಂ ।
ಸ್ಫುಟದಿಂ ಚಿತ್ತಮುಮಾಕ್ಷಿಯುಂ ಪದಪದಕ್ಕಾಮಾತ್ರೆಯುಂಸಾರ್ಗ್ಗವಿಂ॥
ತುಟಿ ತಾನುಂ ತುಟಿ ಬಾಹ್ಯದೊಳ್ನಿಗಱ್ದೊಡಂ ಧ್ಯಾನಕ್ಷಣಕ್ಕೊರ್ತ್ರಿಸಂ
ಘಟಸತ್ಪಿಮ್ರಪದಂಗಳೊಳ್ ಸುಖಿಯುಲಾ ರತ್ನಾಕರಾಧೀಶ್ವರಾ ॥೫೧

ಪಿಡಿಪಿದಾರ್ತನಕೈಗೆ ಸೂತ್ರವೆನಸುಂ ಸಿಲ್ಕಿರ್ದೊಡಂ ವ್ಯೋಮದೊಳ್
ನಡೆಗುಂ ಗಾಳಿಪಟಂ ಸಮಂತದಱವೊಲ್ ಮೆಯ್ಯೊಳ್ಸ್ರನಂ ಜಂಜಡಂ॥
ಬಡೆದಿತ್ತಲ್ಸಿಲುಕಿರ್ದೊಡಂ ನೆನಹು ಲೋಕಾಗ್ರಕ್ಕೆ ಪಾಯ್ದಿತ್ತಲಾ।
ಗಡೆ ಸಿದ್ಧಾಂಘ್ರಿಗಳೊಳ್ಪಳಂಚೆ ಸುಖಿಯ್ಮ ರತ್ನಾಕರಾಧೀಶ್ವರಾ॥೫೨

ಏನೊಂದುಗ್ರಮೊ! ನೋಡ ನೋಟವಱವೇ ಮೆಯ್ಯಾದಶುದ್ಧಾತ್ಮನಂ ।
ಮೀನಾಕ್ಷೀತನು ತನ್ನ ತಳ್ಕಿಸಲೊಡಂ ನೇತ್ರಂಗಳಂ ಕಟ್ಟಿಸು ॥
ಜ್ಞಾನಂಗುಂದಿಸಿ ಮೂರ್ಛೆಗೈದಿಸಿ ಪೆಣಂಬೊಲ್ಮಾಳ್ಕುಗುಂ ಮತ್ತದ
ಕ್ಕಾನಂದಂ ಮಿಗೆ ಮುಗ್ಗನುಂ ಮರುಳಲಾ ರತ್ನಾಕರಾಧೀಶ್ವರಾ ॥ ೪೮

ಮನವೆಬ್ಬಾನೆಗೆ ಕಲ್ಲ ಪೊಯ್ಯುದಿನಿದೇ? ಮೆಯ್ಯುಂಟಿಗಂ ಕಜ್ಜಗಂ।
ಬಡಿಯಂತೋಡುವುದೊಳ್ಳಿತಲ್ತು ಬಗೆವಂದಾತ್ಮಂಗೆ ಸಾರೀರತಂ॥
ಮುದವಲ್ತುದೊಡಮಂತದಂ ಬಿಡಲಶಕ್ಯಂ ಬಿಟ್ಟೊಡೀಯುವ್ವನೋ।
ನ್ಮದಮುದ್ರೇಕವಡಂಗದೇವೆನಕಟಾ! ರತ್ನಾಕರಾಧೀಶ್ವರಾ॥ ೪೯

ತನುವೇೞ್ಕುಂಬವನೌಷಧಕ್ಕೆಳಸನೇ? ಪಿತ್ತೋದ್ರಿಕ್ತಂ ದೇಹಶೋ।
ಧನೆಯಂ ಮಾೞ್ಪವೊಲಂಗನಾಸುರತದಿಂ ತನ್ನಿಂದ್ರಿಯಂ ಪೋಗೆ ಯು॥
ವ್ವನತಾಪಂ ನಿಲುಗುಂ ನಿಲಲ್ ಚರಿತೆ ಸಲ್ಗುಂ ಸದ್ಗೃಹಸ್ಥಂಗೆ ತ।
ತ್ತನು ಬೇಡೆಂಬ ಮುನೀಶ್ವರಂಗುಚಿತವೇ? ರತ್ನಾಕರಾಧೀಶ್ವರಾ ॥ ೫೦

ವಿಷಮೋದ್ರೇಕದ ಜವ್ವನಂದಳೆದೊಡಂ ತತ್ಪ್ರಾಯದೊಳ್ಪೆಣ್ಗಳೊಳ್।
ವಿಷಯಕ್ಕಾಟಿಸನಾವಗಂ ಪರಮತತ್ತ್ವಜ್ಞಾನಸಂತುಷ್ಟಕಂ॥
ಬುಧತಾನಕ್ಕೆಮ ಶಿಷ್ಯನಕ್ಕೆಮ ಅವಂ ಮಾನುಷ್ಯನಲ್ತಲ್ತು ನಿ।
ರ್ವಿಷರೂಪಂ ನಿರಘಂ ನಿರಾವರಣನೈ ರತ್ನಾಕರಾಧೀಶ್ವರಾ॥ ೫೧

ಮರ್ದುಂ ಮಾನಿನಿಯುಂ ಸಮಾನವಱವಂಗೆಂತಲ್ಲದೇಂ ಪೆಣ್ಣೊಳೊಂ।
ದಿರ್ದುಂ ಶ್ರೀಜಿನದತ್ತನುಂ ಕಪಿಳಮಿತ್ರಂ ವಾರಿಷೇಣಾದಿಗಳ್॥
ಸಾರ್ದಿರ್ದರ್ ಸುಡುಗಾಡನೇಕೆ? ತಪವೇಕಾಪರ್ವದೊಳ್ಮತ್ತೆ ಪೆ।
ಣ್ಣೊರ್ದತ್ತೈದುವರೆಯ್ದಿಯುಂ ಭ್ರಮಿತರೋ? ರತ್ನಾಕರಾಧೀಶ್ವರಾ॥

ಧಾರಾಪೂರ್ವಕಮಾದ ಪೆಣ್ಗಳೊಳವರ್ ಪ್ರತ್ಯೇಕಮೇಕೈಕಪ|
ತ್ನೀರಾಗವ್ರತಿಕರ್ ಮದಕ್ಷಯನಿಮಿತ್ತಂ ಕಾಮಮಂ ತೀರ್ಚುವರ್||
ಪಾರಸ್ತ್ರೀಬಹುಲಾಂಗನಾಪರವಧೂಚೇಟೀರತಕ್ಕಾಟಸರ್ |
ಸಾರಾತ್ಮರ್ ಜಿನದತ್ತಮುಖ್ಯರಹರೇ ರತ್ನಾಕರಾಧೀಶ್ವರಾ ||೭೩

ಸತ್ಯಾಧಿಷ್ಠಿತಧರ್ಮಮಂ ತಿಳಿದ ಜೀವಂ ತನ್ನನೀಕಾಮಪ|
ಪ್ರತ್ಯಾಖ್ಯಾನಕಷಾಯಸಂಭವದೆ ಸುತ್ತಿತ್ತಂದು ಪೆಣ್ಗೂಡಿಯುಂ||
ರತ್ಯಂತೋದ್ಭವಹೇಯಮಂ ನೆನೆಯುತುಂ ಪ್ರೋಗಲ್ ಜಯಂ ಪೆಣ್ಗೆ ತಾ|
ನತ್ಯಂತಪ್ರಿಯಬದ್ಧನಾಗೆ ಕಿಡನೇ? ರತ್ನಾಕರಾಧೀಶ್ವರಾ||೭೪

ಪೊಲೆಯುಂ ಮುದ್ದಮೊಗಂ ಬೆಡಂಗೆಸೆಯೆ ಪೆಣ್ಣಿಂತಿರ್ದಳಿಂತಿರ್ದಳಿಂ|
ದೊಲವಿಂ ಭಾವಿಸಿ ಕಾಣ್ಬುದೇ ನರಕಮಬ್ಧಿಪ್ರಾಂತಮಗ್ನಾಪ್ರಿಯೊಳ್||
ಸಲಿಲಂ ತನ್ನುಡಿ ಮುಟ್ಟಿತೋರ್ಪನದೆ ಪಲ್ಯಂಕಾಸನಂ ಸ್ಫಾಟಿಕೋ|
ಜ್ವಲನೆಂದಾಗಳೆ ನಿಮ್ಮಕಂಡೊಡೆ ಸುಖಂ ರತ್ನಾಕರಾಧೀಶ್ವರಾ||೭೫

ಪೆರರಂ ಪೇೞ್ದೊಡೆ ನೋವರಾನೆನಗೆ ಪೇೞ್ವೆಂ ಕಾಮಿನೀಮಾತ್ರದೊ|
ಜ್ಜರಮೆಯ್ಯಂ ಲತೆಯೆಂದು ಮಾಂಸಕುಚಮಂ ಹೇಮಾಬ್ಜಮೆಂದೆಂದು ನೆ||
ತ್ತರನುಂಡಾತುಟಿಯಂ ಸುಧಾರುಚಿಯೆನುತ್ತಂ ಬಿಟ್ಟುದುಂ ಸಾಲದ|
ನ್ಯರನೊಯ್ದಂ ಕವಿಯೋ ಪಲಂ ಕಪಿಯೊ ನಾಂ ರತ್ನಾಕರಾಧೀಶ್ವರಾ||

ಗುರುಮಾತಾಪಿತರಂ ಪತಿವ್ರತೆಯರಂ ಸಮ್ಯಕ್ತ್ವಸಂಪನ್ನರಂ|
ಪಿರಿದುಂ ಬಣ್ಣಿಸಿ ಪೇೞ್ಗೆ ತೀರ್ಥಕಕಥಾಶೃಂಗಾರಮಂ ಪೇೞ್ಗಮೇಣ್||
ದುರಿತಸ್ತ್ರೀಯರನಾತ್ಮಬಾಹ್ಯರನದೇಂ ಪೇೞ್ವರ್ದಿನಂ ಸಗ್ಗದಂ|
ತಿರೆಯಂಧಂಗೆ ತಮಿಸ್ರೆಯುಂ ನುಡಿವರೇ? ರತ್ನಾಕರಾಧೀಶ್ವರಾ||೭೭

ಕವಿತಾಶಕ್ತಿಯೆ ಕಲ್ಪವಲ್ಲಿಯದನಾಸದ್ಧರ್ಮಮೆಂದೆಂಬ ಮೇ।
ರುವಿನೊಳ್ಬಿತ್ತಿ ಮನೋವಿಶುದ್ಧಿಬಲವೀರ್ಯಂ ಬುದ್ಧಿಸಾಫಲ್ಯಮಾ॥
ಕವಿಯುಂ ಸರ್ವರುಮುಣ್ಬರಾಫಲಮನಿತ್ತಲ್ಮಾಣ್ದುಮಿಥ್ಯಾತ್ವಮಾ।
ರವದೊಳ್ಬಿತ್ತಿ ಬೞಲ್ವರೇತಕಕಟಾ! ರತ್ನಾಕರಾಧೀಶ್ವರಾ॥೬೮

ಒಡಲಂ ರಕ್ಷಿಸಲನ್ಯರಂ ನುತಿಸಿದಾಕೊಂಡಾಟಮಂ ಪೆಣ್ಗಳೊಳ್।
ಕಿಡೆ ಬೞ್ದಿಡಿದ ಲಂಪಟಭ್ರಮಣದಾಭಂಡಾಟಮಂ ಸರ್ವರೊಳ್॥
ನುಡಿದೇಂ ಕುರ್ಬುವರಯ್ಯ ಪುಣ್ಯಕಥೆಯೋ ಅಧ್ಯಾತ್ಮಮೋ ಕೋೞ್ಕೆ ಸ।
ರ್ಕ್ಕದುಮಂ ಪೇೞ್ಗಡಲೆಂದು ಕಂಡರಕಟಾ! ರತ್ನಾಕರಾಧೀಶ್ವರಾ॥೬೯

ವೀಣಾಕಿನ್ನರಿವೇಣುತಾಳಮುರಜಾಳಾಪಾದಿಸಂಸಿದ್ಧಿಗೀ।
ರ್ವಾಣಪ್ರಾಕೃತವಾಕ್ಯಸಿದ್ಧಿಸುಕವಿತ್ವಂ ಸುಸ್ವರಂ ಸತ್ಕುಲಂ॥
ತ್ರಾಣಂ ಶ್ರೀ ಚೆಲುವಕ್ಕೆಯಾದೊಡಮದೇನಾಲೀಲೆಗಂ ನಿಮ್ಮ ಕ।
ಲ್ಯಾಣಾರಾಧನೆಯಕ್ಕೆ ಚಿತ್ತವಿಸಿದಂ ರತ್ನಾಕರಾಧೀಶ್ವರಾ॥೭೦

ಏತಕ್ಕಾಡುವರಯ್ಯ ಹಮ್ಮನಕಟಾ! ತಮ್ಮಲ್ಲಿ ವಿದ್ಯಾಕಳಾ।
ಮಾತ್ರಂ ತೞ್ತುದನಾಕವಿತ್ವಮುಸಿರ್ಗಂ ಸುಜ್ಞಾನಮುಂ ತತ್ಪರಂ॥
ಜ್ಯೋತಿರ್ವ್ಯಕ್ತಿಯ ಯುಕ್ತಿಯೇ ನುಡಿಗುಮಿನ್ನಂತಲ್ಲದಲ್ಲಿಯ।
ದ್ಯಾತದ್ವಾ ಬಹುಭಾಷೆಯಿಂ ಫಲವದೇಂ ? ರತ್ನಾಕರಾಧೀಶ್ವರಾ॥೭೧

ತರ್ಕಂ ಬಂದೊಡೆ ದೃಷ್ಟದಿಂ ಶ್ರುತದಿನಂತೂಹಾನುಮಾನಂಗಳಿಂ।
ಬೇರ್ಕೆಯಾಪ್ತಾತ್ಮನನೆಲ್ಲರುಂ ನೆರೆಯೆ ಕಂಡಂತಾಗೆಯಾಸ್ಥಾನಮಾ॥
ಲರ್ಕ್ಕಂಡಾಡೆ ಕುವಾದಿಯುಂ ತಿಳಿಯೆ ಪೇೞಲ್‌ಬಲ್ಲನೇ ಬೋಧಮಾ।
ಲಾರ್ಕ್ಕಂ ಶುಷ್ಕವಿವಾದಿ ತಾನಧಿಕನೇ ರತ್ನಾಕರಾಧೀಶ್ವರಾ॥೭೨

